೨
ಗದ್ಯ

# ಜವಹರಲಾಲ್ ನೆಹರು ಪ್ಲಾನೆಟೇರಿಯಂ

## ಅಭ್ಯಾಸ

**I. ಪದಗಳ ಅರ್ಥ ತಿಳಿಯಿರಿ.**

1. ಪ್ಲಾನೆಟೇರಿಯಂ = ಖಗೋಳ ಶಾಸ್ತ್ರ ವೀಕ್ಷಣಾಲಯ
2. ಉದ್ಯಾನ = ಹೂದೋಟ
3. ಪರಿವರ್ತನೆ = ಬದಲಾವಣೆ, ಮಾರ್ಪಾಡು
4. ಆಡಳಿತ = ಆಳ್ವಿಕೆ, ಕಾರ್ಯನಿರ್ವಹಿಸು
5. ಸೌಧ = ಮಹಲು, ದೊಡ್ಡ ಬಂಗಲೆ
6. ನಿರ್ಮಿಸು = ರಚನೆ ಮಾಡು, ಸೃಷ್ಟಿಸು, ನಿರ್ಮಾಣಮಾಡು
7. ತಾರ = ನಕ್ಷತ್ರ
8. ಆಲಯ = ಮನೆ, ಗೃಹ
9. ಗೋಲ = ಗುಂಡಗಿರುವ
10. ಉಪಕರಣ = ವಸ್ತು, ಪರಿಕರ
11. ಗುಮ್ಮಟ = ಅರ್ಧಗೋಳಾಕಾರದ ಗೋಪುರ, ಗುಂಬಜ್
12. ಪರದೆ = ತೆರೆ
13. ಕಾಯ = ಶರೀರ, ದೇಹ
14. ಕಕ್ಷೆ = ಗ್ರಹ, ತಾರೆಗಳು ತಿರುಗುವ ಪಥ
15. ಪ್ರಯಾಣ = ಪಯಣ, ಸಂಚಾರ
16. ಪ್ರೇಕ್ಷಕ = ವೀಕ್ಷಿಸುವವ
17. ಕುತೂಹಲ = ಕಾತುರ, ಆಸಕ್ತಿ ಮೂಡಿಸುವ
18. ವಿಸ್ಮಯ = ಆಶ್ಚರ್ಯ, ಅಚ್ಚರಿ

II. ಓದಿ ತಿಳಿಯಿರಿ.

ವಿಧಾನ ಸೌಧ = ನಮ್ಮ ರಾಜ್ಯ ಆಡಳಿತ ಕಛೇರಿ

ಜವಹರಲಾಲ್ ನೆಹರು = ಭಾರತದ ಮೊದಲ ಪ್ರಧಾನಮಂತ್ರಿ. ತಮ್ಮ ಹುಟ್ಟುಹಬ್ಬವನ್ನು (ನವಂಬರ್ 14) ಮಕ್ಕಳ ದಿನಾಚರಣೆಯನ್ನಾಗಿ ಆಚರಿಸಿಕೊಂಡವರು.

ಟಿ. ಚೌಡಯ್ಯ = ಹೆಸರಾಂತ ಪಿಟೀಲುವಾದಕ. (ಚಿತ್ರ ನಟ ಅಂಬರೀಷ್ ಅವರ ತಾತ)

ಆಕಾಶ ಕಾಯ = ಗ್ರಹಗಳು, ನಕ್ಷತ್ರಗಳು, ಉಲ್ಕೆ, ನಕ್ಷತ್ರ ಪುಂಜ ಇತ್ಯಾದಿಗಳನ್ನು ಹೊಂದಿರುವಂತಹದು.

ಗ್ರಹಣ = ಎರಡು ಬಗೆಯವು - (1)ಸೂರ್ಯಗ್ರಹಣ (2) ಚಂದ್ರಗ್ರಹಣ

III. ವಿರುದ್ಧ ಪದಗಳನ್ನು ಬರೆಯಿರಿ.

| | | | |
|---|---|---|---|
| 1. ಸ್ಥಿರ | × ಅಸ್ಥಿರ | 5. ಹತ್ತು | × ಇಳಿ |
| 2. ಹಲವು | × ಕೆಲವು | 6. ಕತ್ತಲು | × ಬೆಳಕು |
| 3. ಸೃಷ್ಟಿ | × ನಾಶ | 7. ಕೃತಕ | × ಸ್ವಾಭಾವಿಕ |
| 4. ಸಮೀಪ | × ದೂರ | 8. ಚಲ | × ಅಚಲ |

IV. ಕೊಟ್ಟಿರುವ ಪದಗಳನ್ನು ಗಮನಿಸಿ, ಸರಿಯಾದ ಪದಗಳನ್ನು ಬಿಟ್ಟ ಸ್ಥಳಗಳಲ್ಲಿ ತುಂಬಿರಿ.

1. ಕರ್ನಾಟಕದ ರಾಜಧಾನಿ **ಬೆಂಗಳೂರು**
2. ಪ್ಲಾನೆಟೇರಿಯಂ ಎಂಟು **ಕೋನಗಳ** ಕಟ್ಟಡವಾಗಿದೆ.
3. ಸ್ಪೇಸ್ ಮಾಸ್ಟರ್‌ನನ್ನು **ಜರ್ಮನಿಯಿಂದ** ತರಿಸಿ ಸ್ಥಾಪಿಸಲಾಗಿದೆ.
4. ಪ್ರಕೃತಿಯಲ್ಲಿ ಕಾಣುವ **ಆಕಾಶಕಾಯ**ಗಳ ಚಲನೆಯನ್ನು ಇಲ್ಲಿ ಸೃಷ್ಟಿಸಬಹುದು.
5. ಏಕಕಾಲಕ್ಕೆ 225 **ಪ್ರೇಕ್ಷಕರು** ಕಾರ್ಯಕ್ರಮವನ್ನು ವೀಕ್ಷಿಸಬಹುದು.

V. ಸ್ವಂತ ವಾಕ್ಯ ಮಾಡಿರಿ.

1. ಆಡಳಿತ - ವಿಧಾನಸೌಧವು ನಮ್ಮ ರಾಜ್ಯದ ಆಡಳಿತ ವ್ಯವಸ್ಥೆಯ ಕಟ್ಟಡವಾಗಿದೆ.
2. ನಿರ್ಮಿಸು - ಬೆಂಗಳೂರಿನಲ್ಲಿ ಮೆಟ್ರೋ ರೈಲಿನ ಮೇಲ್ಸೇತುವೆಯನ್ನು ನಿರ್ಮಿಸಲಾಗಿದೆ.

3. ಕಟ್ಟಡ – ಕಟ್ಟಡ ಕಟ್ಟಲು ಕಲ್ಲು ಸಿಮೆಂಟ್ ಬೇಕಾಗುತ್ತದೆ.

4. ಪರದೆ – ನಾಟಕ ಆರಂಭವಾಗುವಾಗ ಪರದೆ ಸರಿಯಿತು.

5. ಚಲನೆ – ಭೂಮಿಯ ಸುತ್ತ ಚಂದ್ರ ಚಲನೆ ಮಾಡುತ್ತದೆ.

6. ವೀಕ್ಷಿಸು– ನಾನು ದೂರದರ್ಶನ ಕಾರ್ಯಕ್ರಮವನ್ನು ವೀಕ್ಷಿಸುವೆನು.

**VI. ಹೊಂದಿಸಿ ಬರೆಯಿರಿ**

| ಅ | ಆ |
|---|---|
| 1. ಉದ್ಯಾನ | ಅ. ನಗರ |
| 2. ಸ್ಥಿರ | ಆ. ಚಿತ್ರ |
| 3. ಮಹಾನಗರ | ಇ. ಪಾಲಿಕೆ |
| 4. ವಿಕಾಸ | ಈ. ಸೌಧ |
| 5. ಭೂಮಿ | ಉ. ಕಕ್ಷೆ |

**VII. ಕೆಳಗಿನ ವಾಕ್ಯಗಳನ್ನು ಏಕವಚನ ಮತ್ತು ಬಹುವಚನಗಳಲ್ಲಿ ಬರೆಯಿರಿ.**

1. ಮೀನುಗಳು ನೀರಿನಲ್ಲಿ ವಾಸಿಸು – ವಾಸಿಸುತ್ತವೆ.

2. ರವಿಯು ಕೊಳಲನ್ನು ನುಡಿಸು – ನುಡಿಸುವನು.

3. ಹುಡುಗಿಯು ರಾಗವಾಗಿ ಹಾಡಿ – ಹಾಡಿದಳು.

4. ಆಕಾಶದಲ್ಲಿ ಅಸಂಖ್ಯಾತ ನಕ್ಷತ್ರಗಳು – ನಕ್ಷತ್ರಗಳಿವೆ.

5. ರಾಜು ಮತ್ತು ಶ್ಯಾಮ ಆಟ ಆಡಿ – ಆಟ ಆಡಿದರು.

**VIII. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

**1. ಬೆಂಗಳೂರು ಎಂತಹ ನಗರವೆಂದು ಪ್ರಸಿದ್ಧಿಯಾಗಿತ್ತು?**

ಉ: ಬೆಂಗಳೂರು ಉದ್ಯಾನನಗರಿಯೆಂದು ಪ್ರಸಿದ್ಧಿಯಾಗಿತ್ತು.

**2. ಟಿ.ಚೌಡಯ್ಯ ರಸ್ತೆ ಎಲ್ಲಿದೆ?**

ಉ: ಟಿ. ಚೌಡಯ್ಯ ರಸ್ತೆ ವಿಧಾನ ಸೌಧ ಮತ್ತು ವಿಕಾಸ ಸೌಧಗಳ ಸಮೀಪ ಇದೆ.

**3. ಜವಹರಲಾಲ್ ನೆಹರು ಪ್ಲಾನೆಟೇರಿಯಂ ಎಷ್ಟರಲ್ಲಿ ನಿರ್ಮಾಣವಾಯಿತು?**

ಉ: ಜವಾಹರ್‌ಲಾಲ್ ನೆಹರು ಪ್ಲಾನೆಟೇರಿಯಂ 1989ರಲ್ಲಿ ನಿರ್ಮಾಣವಾಯಿತು.

4. **ತಾರಾಲಯದ ಹೃದಯಭಾಗ ಯಾವುದು?**

ಉ: ತಾರಾಲಯದ ಹೃದಯಭಾಗ 'ಸ್ಕೈ ಥಿಯೇಟರ್' ಆಗಿದೆ.

5. **ವೀಕ್ಷಕ ವಿವರಣೆಯನ್ನು ಯಾವ ಯಾವ ಭಾಷೆಗಳಲ್ಲಿ ನೀಡಲಾಗುತ್ತದೆ?**

ಉ: ವೀಕ್ಷಕ ವಿವರಣೆಯನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ನೀಡಲಾಗುತ್ತದೆ.

6. **ತಾರಾಲಯದ ಜವಾಬ್ದಾರಿಯನ್ನು ಯಾವ ಸಂಸ್ಥೆ ನಡೆಸಿಕೊಂಡು ಹೋಗುತ್ತಿದೆ?**

ಉ: ತಾರಾಲಯದ ಜವಾಬ್ದಾರಿಯನ್ನು ಬೆಂಗಳೂರು ಅಸೋಸಿಯೇಷನ್ ಫಾರ್ ಸೈನ್ಸ್ ಎಜುಕೇಷನ್ ಸಂಸ್ಥೆ ನಡೆಸಿಕೊಂಡು ಹೋಗುತ್ತದೆ.

**IX. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. **ಬೆಂಗಳೂರು ಪ್ರಸಿದ್ಧವಾಗಿರಲು ಕಾರಣಗಳೇನು?**

ಉ: ಬೆಂಗಳೂರು ಕರ್ನಾಟಕ ರಾಜಧಾನಿಯಾಗಿದೆ. ಇದು ಉದ್ಯಾನನಗರಿ ಹಾಗೂ ನಐ.ಟಿ. ನಗರವೆಂದು ಪ್ರಸಿದ್ಧಿ ಪಡೆದಿದೆ. ಇಲ್ಲಿ ವಿಧಾನಸೌಧ ಇಕಾಸ ಸಾಧಗಳು ಇವೆ. ಜವಹರಲಾಲ್‌ನೆಹರು ಪ್ಲಾನೆಟೇರಿಯಂ ಇದೆ, ಹೀಗೆ ಬೆಂಗಳೂರು ಪ್ರಸಿದ್ಧವಾಗಿದೆ.

2. **ತಾರಾಲಯದ ಪ್ರದರ್ಶನವನ್ನು ಇಲ್ಲಿ ಹೇಗೆ ಸೃಷ್ಟಿಸಲಾಗುತ್ತದೆ?**

ಉ: ತಾರಾಲಯದ ಸ್ಕೈ ಥಿಯೇಟರ್, ಸ್ಪೇಸ್ ಮಾಸ್ಟರ್ ಪ್ರದರ್ಶನ ಉಪಕರಣಗಳಿವೆ. ಮಳೆ, ಬಿಸಿಲು, ಬೆಳಕು, ಕತ್ತಲು ಎನ್ನದೆ ಯಾವುದೇ ಸಮಯದಲ್ಲಾದರೂ ಗುಮ್ಮಟದ ಪರದೆಯ ಮೇಲೆ ಕೃತಕವಾದ ಆಕಾಶ, ನಕ್ಷತ್ರ, ಗ್ರಹ ಇವುಗಳ ಚಲನೆಯ ಪ್ರದರ್ಶನವನ್ನು ಸೃಷ್ಟಿಸಲಾಗುತ್ತದೆ.

3. **ಖಗೋಳ ಶಾಸ್ತ್ರಕ್ಕೆ ಸಂಬಂಧಿಸಿದ ಪ್ರಶ್ನೆಗಳು ಯಾವುವು?**

ಉ: ಭೂಮಿ ತನ್ನ ಕಕ್ಷೆಯಲ್ಲಿ ನಿಜಕ್ಕೂ ತಿರುಗುತ್ತಿದೆಯೇ? ಭೂಮಿ ಸೂರ್ಯನ ಸುತ್ತ ಪ್ರಯಾಣ ಮಾಡುತ್ತಿದೆಯೇ? ಬೆಳಕು ಕತ್ತಲು ಹೇಗಾಗುತ್ತವೆ? ಕತ್ತಲಾದ ನಂತರ ಸೂರ್ಯ ಎಲ್ಲಿಗೆ ಮರೆಯಾಗುತ್ತಾನೆ? ಗ್ರಹಣವೆಂದರೇನು? ಗ್ರಹಗಳು ಯಾವುವು? ಅವುಗಳಲ್ಲಿ ಏನಿದೆ? ನಕ್ಷತ್ರಗಳ ಹುಟ್ಟು ಸಾವು ಹೇಗೆ ಉಂಟಾಗುತ್ತದೆ? ಹೀಗೆ ಖಗೋಳ ಶಾಸ್ತ್ರಕ್ಕೆ ಸಂಬಂಧಿಸಿದ ಪ್ರಶ್ನೆಗಳು.

4. **ಈ ಕಟ್ಟಡದಲ್ಲಿರುವ ಇತರ ವಿಶೇಷ ಪ್ರದರ್ಶನಗಳಾವುವು?**

ಉ: ಈ ಕಟ್ಟಡದಲ್ಲಿರುವ ಇತರ ಪ್ರದರ್ಶನಗಳೆಂದರೆ ಕಲಾವಿದರ ದೃಷ್ಟಿಯಲ್ಲಿ ವಿಶ್ವ ಎಂಬ ವಸ್ತುಪ್ರದರ್ಶನವಿದೆ. ಮತ್ತೊಂದರಲ್ಲಿ ವಿಶ್ವದ ಅನೇಕ ಕುತೂಹಲಗಳ ಸ್ಥಿರ ಚಿತ್ರಗಳ ಪ್ರದರ್ಶನವಿದೆ.

4. ಕೆಳಗಿನ ಗದ್ಯಭಾಗವನ್ನು ನಿಧಾನವಾಗಿ ಓದಿರಿ. ಅರ್ಥ ಮಾಡಿಕೊಳ್ಳಿರಿ, ನಂತರ ಕೇಳಲಾದ ಪ್ರಶ್ನೆಗಳಿಗೆ ಉತ್ತರಿಸಿ.

1. ಗಿಳಿಗಳು ಎಲ್ಲಿ ವಾಸವಾಗಿದ್ದವು?

ಉ: ಗಿಳಿಗಳು ಮರದಲ್ಲಿ ವಾಸವಾಗಿದ್ದವು.

2. ಗಿಳಿಗಳು ಏನನ್ನು ತಿನ್ನುತ್ತಿದ್ದವು ?

ಉ: ಗಿಳಿಗಳು ಕಾಳು, ಹುಳು ಹುಪ್ಪಡಿಗಳನ್ನು ತಿನ್ನುತ್ತಿದ್ದವು.

3. ಹೆಣ್ಣು ಗಿಳಿಯು ಎಷ್ಟು ಮೊಟ್ಟೆಗಳನ್ನಿಟ್ಟಿತು ?

ಉ: ಹೆಣ್ಣು ಗಿಳಿಯು ಎರಡು ಮೊಟ್ಟೆಗಳನ್ನು ಇಟ್ಟಿತು

4. ಬೇಟೆಗಾರನು ಏಕೆ ಸಂತಸಪಟ್ಟನು ?

ಉ: ಬೇಟೆಗಾರನು ಗಿಳಿಗಳನ್ನು ನೋಡಿ ಸಂತಸಪಟ್ಟನು.

5. ಬಲೆಯಲ್ಲಿ ಬಿದ್ದ ಹಕ್ಕಿಗಳು ಯಾವುವು?

ಉ: ಬಲೆಯಲ್ಲಿ ಮರಿಹಕ್ಕಿಗಳು ಸಿಕ್ಕಿಬಿದ್ದವು.

* * *